"ಸರಿ, ಒಂದೆರಡು ಸಂದರ್ಭಗಳಲ್ಲಿ ನನಗೆ ಸಣ್ಣಪುಟ್ಟ ಕಮಿಷನ್ ಸಿಗುವಂತೆ ಮಾಡಿದ್ದಾನೆ."

"ಮುಂದುವರೆಸಿ ಮಿಸ್ಟರ್ ಹಾರ್ಡ್‌ಮನ್" ಪೈರೆಟ್ ಸೂಚಿಸಿದ.

ಹಾರ್ಡ್‌ಮನ್ ದಯನೀಯ ನೋಟ ಹರಿಸಿದರು. ಕೊನೆಯ ವಿಷಯವನ್ನು ಮುಂದುವರೆಸುವಂತೆ ಕೇಳುತ್ತಿದ್ದಾನೆ! ಆದರೆ ಪೈರೆಟ್‌ನ ಕನಿಕರವಿಲ್ಲದ ಮೌನದ ಮುಂದೆ ಸೋತು ಮುಂದುವರೆಸಿದರು.

"ನೋಡಿ ಮಿ. ಪೈರೆಟ್, ನಿಮಗೆ ಗೊತ್ತಿದೆ. ನಾನು ಹಳೆಯ ಆಭರಣಗಳ ಸಂಗ್ರಹದಲ್ಲಿ ಆಸಕ್ತಿಯಿರುವವನೆಂದು. ಕೆಲವೊಮ್ಮೆ ಕೌಟುಂಬಿಕವಾದ, ವಂಶಪಾರಂಪರ್ಯವಾದ ಚರಾಸ್ತಿಯನ್ನು ಇತ್ಯರ್ಥ ಮಾಡುವುದು ಬಹಳ ಕಷ್ಟ. ಅವನ್ನು ನಿಮಗೆ ಗೊತ್ತಿರುವ ಹಾಗೆ ಮಾರುಕಟ್ಟೆಯಲ್ಲಿ ಅಥವಾ ಡೀಲರ್‌ಗಳಿಗೆ ನೇರವಾಗಿ ಮಾರುವಂತಿಲ್ಲ. ಆದರೆ ವೈಯಕ್ತಿಕವಾಗಿ ನನಗೆ ಮಾರಾಟ ಮಾಡುವುದು ಸುಲಭದ ಕೆಲಸವಲ್ಲ. ಪಾರ್ಕರ್ ಅಂತಹ ವಸ್ತುಗಳ ಮಾಹಿತಿಯನ್ನು ಒದಗಿಸುತ್ತಾನೆ. ಎರಡೂ ಕಡೆ ಅವನಿಗೆ ಸಂಪರ್ಕ ಇದೆ. ಆತನೆ ಸಣ್ಣಪುಟ್ಟ ತೊಡಕುಗಳನ್ನು ನಿಭಾಯಿಸುತ್ತಾನೆ. ಅಂತದ್ದೇನಾದರೂ ಇದ್ದರೆ ಆತ ನನ್ನ ಗಮನಕ್ಕೆ ತರುತ್ತಾನೆ. ಉದಾಹರಣೆಗೆ ಕೌಂಟೆಸ್ ವೇರ ರೊಸ್ಸಕಾಫ್ ತನ್ನ ಕುಟುಂಬದ ಆಭರಣಗಳನ್ನು ರಷ್ಯಾದಿಂದ ಬರುವಾಗ ತಂದಿದ್ದಳು. ಅವಳು ಅದನ್ನು ಮಾರಾಟ ಮಾಡುವುದರ ಕುರಿತಂತೆ ಆತಂಕವಿತ್ತು. ಬರ್ನಾರ್ಡ್ ಪಾರ್ಕರ್ ಆ ವ್ಯವಹಾರ ಆಗುವಂತೆ ಮಾಡಿದ."

"ಹಾಗೋ, ನೀವು ಅವನನ್ನು ಕಣ್ಣುಮುಚ್ಚಿ ನಂಬಿದ್ದೀರಿ?" ಪೈರೆಟ್ ಆಲೋಚಿಸುತ್ತಾ ಹೇಳಿದ.

"ನನಗೆ ಬೇರೆ ದಾರಿಯಿಲ್ಲ."

"ಮಿ. ಹಾರ್ಡ್‌ಮನ್, ಈ ನಾಲ್ಕು ಮಂದಿಯಲ್ಲಿ ನಿಮಗೆ ಯಾರ ಮೇಲೆ ಸಂದೇಹವಿದೆ?"

"ಓಹೋ! ಪೈರೆಟ್, ಎಂತಹ ಪ್ರಶ್ನೆ ನಿಮ್ಮದು? ನಾನು ಹೇಳಿದೆನಲ್ಲ, ಅವರೆಲ್ಲ ನನ್ನ ಗೆಳೆಯರು ಎಂದು. ನನಗೆ ಯಾರ ಮೇಲೂ ಸಂದೇಹವಿಲ್ಲ. ಯಾವ ಆಧಾರದ ಮೇಲೆ ನೀವು ಸಂದೇಹಪಡ್ತೀರಾ?"

"ನಾನು ನಿಮ್ಮ ಮಾತನ್ನು ಒಪ್ಪುವುದಿಲ್ಲ. ನೀವು ಆ ನಾಲ್ವರಲ್ಲಿ ಒಬ್ಬರ ಮೇಲೆ ಸಂದೇಹ ಪಡ್ತಿದ್ದೀರಿ. ಅದರಲ್ಲಿ ಕೌಂಟೆಸ್ ವೇರ ರೊಸ್ಸಕಾಫ್ ಅಲ್ಲ. ಮಿ. ಪಾರ್ಕರ್ ಕೂಡ ಅಲ್ಲ. ಅದು ಲೇಡಿ ರನ್‌ಕಾರ್ನ್ ಅಥವಾ ಮಿ. ಜಾನ್‌ಸ್ಟನ್?"

"ನಿಜವಾಗಿಯೂ ನೀವು ನನ್ನನ್ನು ಮೂಲೆಗುಂಪು ಮಾಡ್ತಾ ಇದ್ದೀರಿ, ಪೈರೆಟ್. ನಾನು ಇದೊಂದು ಹಗರಣ ಆಗ್ಬಾರ್ದೂಂತ ಉದ್ವೇಗಕ್ಕೊಳಗಾಗಿದ್ದೇನೆ. ಲೇಡಿ ರನ್‌ಕಾರ್ನ್ ಇಂಗ್ಲೆಂಡ್‌ನ ಹಳೆಯ ಕುಟುಂಬಕ್ಕೆ ಸೇರಿದವಳು. ಒಂದಂತು ಸತ್ಯ, ಅವಳ ಚಿಕ್ಕಮ್ಮ ಲೇಡಿ ಕರೋಲಿನ್ ಖಿನ್ನತೆಗೊಳಗಾದವರು. ಅದು ಎಲ್ಲರಿಗೂ ತಿಳಿದಿರುವ ವಿಷಯ."

"ಲೇಡಿ ರನ್‌ಕಾರ್ನ್ ಅವರ ಚಿಕ್ಕಮ್ಮ ಕದಿಯುವ ಪ್ರವೃತ್ತಿಯುಳ್ಳವರೆ? ತುಂಬಾ ಆಸಕ್ತಿಯ ವಿಷಯ ಇದು. ನೀವು ಅನುಮತಿ ಕೊಟ್ಟರೆ ನಾನು ತಿಜೋರಿಯನ್ನು ಪರೀಕ್ಷಿಸಬಹುದೇ?"

ಹಾರ್ಡ್‌ಮನ್ ಒಪ್ಪಿಗೆಯಿತ್ತಾಗ ಪೈರೆಟ್ ತಿಜೋರಿಯ ಬಾಗಿಲನ್ನು ದೂಡಿ ಪರೀಕ್ಷಿಸಿದ. ನಮಗೆ ಖಾಲಿಯಾದ ವೆಲ್ವೆಟ್ ಬಟ್ಟೆಯಿದ್ದ ತಿಜೋರಿಯ ಪಕ್ಕದಲ್ಲಿ ಅಂತರ ಕಾಣಿಸಿತು.

"ಅರೆ! ಬಾಗಿಲೇ ಸರಿಯಾಗಿ ಮುಚ್ಚುತ್ತಿಲ್ಲ" ಪೈರೆಟ್ ಅದನ್ನು ಮುಚ್ಚುತ್ತಾ ತೆರೆಯುತ್ತಾ ಹೇಳಿದ.

"ನನಗೆ ಯಾಕೇಂತ ಆಶ್ಚರ್ಯವಾಗ್ತಿದೆ. ಹಾಂ! ಇಲ್ಲೇನೋ ಇದೆ. ಚಿಡಿಯಲ್ಲಿ ಕೈಗೆ ತೊಡುವ ಒಂದು ಕೈಗವಸಿದೆ. ವ್ಯಕ್ತಿಯೊಬ್ಬನ ಕೈಗವಸು."

ಅವನು ಅದನ್ನು ಎಳೆದು ತೆಗೆದು ಹಾರ್ಡ್‌ಮನ್‌ರಿಗೆ ತೋರಿಸಿದ.

"ಇದು ನನ್ನ ಕೈಗವಸಲ್ಲ" ಅವರು ದೃಢಪಡಿಸಿದರು.